# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಮುಖ್ಯ ಇಂಜಿನಿಯರ್, ಕೇಂದ್ರ ಯಾಂತ್ರಿಕ ಸಂಸ್ಥೆ, ಬೆಂಗಳೂರು, ಇವರ ಕಛೇರಿ ಮತ್ತು ಅದರ ವ್ಯಾಪ್ತಿಯಲ್ಲಿರುವ ಇತರೆ ಕಛೇರಿಗಳನ್ನು ಮತ್ತು ಅವುಗಳಿಗೆ ಹೊಂದಿಕೊಂಡ ಹಂಗಾಮಿ ಮತ್ತು ಸೂಪರ್‌ನ್ಯೂಮರರಿ ಹುದ್ದೆಗಳನ್ನು ದಿನಾಂಕ:01-04-2019 ರಿಂದ ಮುಂದುವರೆಸುವ ಬಗ್ಗೆ.

* * *

**ಓದಲಾಗಿದೆ :-**

1. ಸರ್ಕಾರಿ ಆದೇಶ ಸಂಖ್ಯೆ:ಜಸಂಇ 20 ಎನ್‌ಎಂಎಸ್ 2018, ದಿನಾಂಕ:28-04-2018
2. ಮುಖ್ಯ ಇಂಜಿನಿಯರ್, ಕೇಂದ್ರ ಯಾಂತ್ರಿಕ ಸಂಸ್ಥೆ, ಬೆಂಗಳೂರು, ಇವರ ಪತ್ರ ಸಂಖ್ಯೆ:ಮುಇಂ/ಕೇಯಾಸಂ/ಸಿ-2/ಕ.ಮು/2018-19/1615, ದಿನಾಂಕ:08.02.2019
3. ಮುಖ್ಯ ಇಂಜಿನಿಯರ್, ಕೇಂದ್ರ ಯಾಂತ್ರಿಕ ಸಂಸ್ಥೆ, ಬೆಂಗಳೂರು, ಇವರ ಪತ್ರ ಸಂಖ್ಯೆ:ಮುಇಂ/ಕೇಯಾಸಂ/ಸಿ-2/ಕ.ಮು/2018-19/1703, ದಿನಾಂಕ:25.02.2019

**ಪ್ರಸ್ತಾವನೆ :-**

ಮೇಲೆ ಓದಲಾದ (1) ರ ಸರ್ಕಾರಿ ಆದೇಶದಲ್ಲಿ ಮುಖ್ಯ ಇಂಜಿನಿಯರ್, ಕೇಂದ್ರ ಯಾಂತ್ರಿಕ ಸಂಸ್ಥೆ, ಬೆಂಗಳೂರು, ಇವರ ಕಛೇರಿ ಮತ್ತು ಅದರ ವ್ಯಾಪ್ತಿಯಲ್ಲಿ ಬರುವ ಇತರೆ ಕಛೇರಿಗಳಲ್ಲಿನ 321 ತಾತ್ಕಾಲಿಕ ಹುದ್ದೆಗಳನ್ನು ಮತ್ತು 90 ಸೂಪರ್‌ನ್ಯೂಮರರಿ ಹುದ್ದೆಗಳನ್ನು ಸೇರಿಸಿ ಒಟ್ಟು 411 ಹುದ್ದೆಗಳನ್ನು ದಿನಾಂಕ:01.04.2018 ರಿಂದ 31.03.2019 ರವರೆಗೆ (ಒಂದು ವರ್ಷದ ಅವಧಿಗೆ) ಮುಂದುವರೆಸಲಾಗಿತ್ತು.

2. ಮೇಲೆ ಓದಲಾದ (2) ಮತ್ತು (3) ರಲ್ಲಿನ ಪತ್ರಗಳಲ್ಲಿ ಮುಖ್ಯ ಇಂಜಿನಿಯರ್, ಕೇಂದ್ರ ಯಾಂತ್ರಿಕ ಸಂಸ್ಥೆ, ಬೆಂಗಳೂರು, ಇವರು ಸದರಿ ವಲಯದ ಕಾರ್ಯದೊತ್ತಡದ ವಿವರಗಳನ್ನು ಒದಗಿಸುತ್ತಾ, ಸದರಿ ಕಛೇರಿ ವ್ಯಾಪ್ತಿಯಲ್ಲಿರುವ ಕಾರ್ಯಾಗಾರ ಮತ್ತು ಯಾಂತ್ರಿಕ ವಿಭಾಗ, ಗೊರೂರು, ಹುಣಸಗಿ, ಭೀಮರಾಯನಗುಡಿ ಹಾಗೂ ಈ 3 ವಿಭಾಗಗಳ ಅಧೀನದಲ್ಲಿರುವ ಒಟ್ಟು 14 ಉಪ ವಿಭಾಗ ಕಛೇರಿಗಳು ಕಾರ್ಯ ನಿರ್ವಹಿಸುತ್ತಿದ್ದು, ಅವುಗಳಿಗೆ ಹೊಂದಿಕೊಂಡಿರುವ ಹಂಗಾಮಿ 321 ಹುದ್ದೆಗಳನ್ನು ಮತ್ತು ವಿಭಾಗ ಹಾಗೂ ಉಪವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 77 ಸೂಪರ್‌ನ್ಯೂಮರರಿ ಹುದ್ದೆಗಳೊಂದಿಗೆ ದಿನಾಂಕ:01.04.2019 ರಿಂದ 31.03.2020 ರವರೆಗೆ ಮುಂದುವರೆಸುವುದು ಅವಶ್ಯವಾಗಿರುವುದಾಗಿ ತಿಳಿಸಿರುತ್ತಾರೆ. ಸದರಿ ವಲಯವು ಕರ್ನಾಟಕ ರಾಜ್ಯದಲ್ಲಿಯ ಜಲ ಸಂಪನ್ಮೂಲ ಇಲಾಖೆಯಲ್ಲಿರುವ ಏಕೈಕ ಯಾಂತ್ರಿಕ ವಲಯವಾಗಿದ್ದು, ಜಲ ಸಂಪನ್ಮೂಲ ಇಲಾಖೆ, ಸಣ್ಣ ನೀರಾವರಿ, ಲೋಕೋಪಯೋಗಿ, ರಾಷ್ಟ್ರೀಯ ಹೆದ್ದಾರಿ, ನಿಗಮ ಮಂಡಳಿಗಳು ಹಾಗೂ ಇತರೆ ಇಲಾಖೆಗೆ ಸಂಬಂಧಿಸಿದ ವಾಹನಗಳನ್ನು ಮತ್ತು ಯಂತ್ರೋಪಕರಣಗಳ ನಿರ್ವಹಣೆ, ಉಸ್ತುವಾರಿ, ದುರಸ್ತಿ ಕೆಲಸ ಹಾಗೂ ಅನುಪಯುಕ್ತ ಯಂತ್ರೋಪಕರಣ ಮತ್ತು ವಾಹನಗಳನ್ನು ಹರಾಜು ಮೂಲಕ ವಿಲೇವಾರಿ ಮಾಡುವ ಕಾರ್ಯಗಳನ್ನು ಸಹ ನಿರ್ವಹಿಸುತ್ತಿದೆ. ಈ ಎಲ್ಲಾ ಅಂಶಗಳನ್ನು ಪರಿಗಣಿಸಿ ಕೇಂದ್ರ ಯಾಂತ್ರಿಕ ಸಂಸ್ಥೆಯ ಕಛೇರಿ ಮತ್ತು ಅದರ ಅಧಿಕಾರ ವ್ಯಾಪ್ತಿಯಲ್ಲಿರುವ ಕಛೇರಿಗಳನ್ನು ಹಾಗೂ ಅದಕ್ಕೆ ಹೊಂದಿಕೊಂಡಿರುವ ಹಂಗಾಮಿ ಹುದ್ದೆಗಳನ್ನು ಸೂಪರ್‌ನ್ಯೂಮರರಿ ಹುದ್ದೆಗಳೊಂದಿಗೆ ದಿನಾಂಕ:01.04.2019 ರಿಂದ 31.03.2020 ರವರೆಗೆ ಮುಂದುವರೆಸುವಂತೆ ಕೋರಿರುತ್ತಾರೆ.

...2

3. ಸದರಿ ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಜಸಂಇ 11 ಎನ್‌ಎಂಎಸ್ 2019, ಬೆಂಗಳೂರು, ದಿನಾಂಕ:09-04-2019**

ಮುಖ್ಯ ಇಂಜಿನಿಯರ್, ಕೇಂದ್ರ ಯಾಂತ್ರಿಕ ಸಂಸ್ಥೆ, ಬೆಂಗಳೂರು ಕಛೇರಿ ಮತ್ತು ಅದರ ವ್ಯಾಪ್ತಿಯಲ್ಲಿ ಬರುವ ಇತರೆ ಕಛೇರಿಗಳಲ್ಲಿನ ಅನುಬಂಧ-1 ರಲ್ಲಿ ನಮೂದಿಸಿರುವ 321 ತಾತ್ಕಾಲಿಕ ಹುದ್ದೆಗಳನ್ನು ಮತ್ತು ಅನುಬಂಧ-2 ರಲ್ಲಿ ನಮೂದಿಸಿರುವ 77 ಸೂಪರ್‌ನ್ಯೂಮರರಿ ಹುದ್ದೆಗಳನ್ನು ಸೇರಿಸಿ ಒಟ್ಟು 398 ಹುದ್ದೆಗಳನ್ನು ದಿನಾಂಕ:01-04-2019 ರಿಂದ 31-03-2020 ರವರೆಗೆ (ಒಂದು ವರ್ಷದ ಅವಧಿಗೆ) ಈ ಕೆಳಕಂಡ ಷರತ್ತಿಗೊಳಪಟ್ಟು ಮುಂದುವರೆಸಲು ಸರ್ಕಾರದ ಅನುಮೋದನೆಯನ್ನು ನೀಡಲಾಗಿದೆ.

"ಸೂಪರ್‌ನ್ಯೂಮರರಿ ಹುದ್ದೆಯಲ್ಲಿರುವವರು ನಿವೃತ್ತಿ ಹೊಂದಿದಲ್ಲಿ ಅಥವಾ ಮಂಜೂರಾದ ಹುದ್ದೆಗೆ ಪರಿಗಣಿಸಿದಲ್ಲಿ ಅಥವಾ ಮರಣ ಹೊಂದಿದಲ್ಲಿ ಅಥವಾ ಪದೋನ್ನತಿ ಹೊಂದಿದಲ್ಲಿ ಆಯಾ ಹುದ್ದೆಗಳನ್ನು ರದ್ದುಗೊಳಿಸುವುದು"

2. ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ:FD 1 TFP 96, ದಿನಾಂಕ:10-07-1996, ರನ್ವಯ ಸರ್ಕಾರದ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ ಇವರಿಗೆ ಪ್ರತ್ಯಾಯೋಜಿಸಲಾದ ಅಧಿಕಾರವನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
09/04/19

ಸರ್ಕಾರದ ಅಧೀನ ಕಾರ್ಯದರ್ಶಿ (ತಾಂತ್ರಿಕ-2),
ಜಲ ಸಂಪನ್ಮೂಲ ಇಲಾಖೆ,
ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ, ಬೆಂಗಳೂರು.

(ಬಿ.ಹರಿನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ (ತಾಂತ್ರಿಕ-2),
ಜಲ ಸಂಪನ್ಮೂಲ ಇಲಾಖೆ.

ಇವರಿಗೆ :-

1. ಮಹಾಲೇಖಪಾಲರು (ಜಿ ಅಂಡ್ ಎಸ್‌ಎಸ್‌ಎ), ಕರ್ನಾಟಕ, ಬೆಂಗಳೂರು
2. ಮುಖ್ಯ ಇಂಜಿನಿಯರ್, ಕೇಂದ್ರ ಯಾಂತ್ರಿಕ ಸಂಸ್ಥೆ, ಬೆಂಗಳೂರು
3. ಮುಖ್ಯ ಇಂಜಿನಿಯರ್, ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು
4. ಸರ್ಕಾರದ ಉಪ ಕಾರ್ಯದರ್ಶಿಗಳು (ಸೇವೆಗಳು), ಜಲ ಸಂಪನ್ಮೂಲ ಇಲಾಖೆ, ಬೆಂಗಳೂರು
5. ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿಗಳು (ಆರ್ಥಿಕ ಕೋಶ), ಲೋಕೋಪಯೋಗಿ ಇಲಾಖೆ, ವಿಧಾನ ಸೌಧ, ಬೆಂಗಳೂರು
6. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು